

ದೈಹಿಕ ಬಣ್ಣ, ವಿನ್ಯಾಸ ದೈವಸೃಷ್ಟಿ. ಇವುಗಳು ನೋಡಲು ಬಹಳ ಆಕರ್ಷಕ. ಒಂದು ಪ್ರಾಣಿಯಿಂದ ಇನ್ನೊಂದರ ವಿಭಿನ್ನತೆಯನ್ನು ಗುರುತಿಸುವುದೂ ಈ ಬಣ್ಣ, ಆಕಾರ, ವಿನ್ಯಾಸ ವೈವಿಧ್ಯಗಳಿಂದಲೇ. ಇದೇ ವಿನ್ಯಾಸಗಳು ಉಡುಪಿನಲ್ಲಿ ಮೂಡಿದರೆ ಅದರ ಚೆಲುವೇ ಬೇರೆ. ಮಕ್ಕಳ ಪ್ರಿಯವಾದ ಪ್ರಾಣಿಗಳು ತಮ್ಮ ಜೊತೆಯಲ್ಲೇ ಇದ್ದರೆ ಎಷ್ಟು ಸೊಗಸಲ್ಲವೇ? ಮಕ್ಕಳ, ಮಹಿಳೆಯರ ಮನದಿಂಗಿತ ಅರಿತ ಫ್ಯಾಷನ್ ವಿನ್ಯಾಸಗಾರರು ಇಂಥ ಉಡುಪುಗಳನ್ನು ಮಾರುಕಟ್ಟೆಗೆ ತಂದಿದ್ದೇ ಇದೇ ಕಾರಣಕ್ಕಾಗಿ ಎಂದರೆ ತಪ್ಪಿಲ್ಲ.

ಚಿರತೆ, ಜೀಬ್ರಾ, ಹುಲಿ, ಕರಡಿ, ಮುಂಗುಸಿ ಮುಂತಾದ ಪ್ರಾಣಿಗಳ ಚರ್ಮದಂತಿರುವ ಬಟ್ಟೆಗಳು ಈಗ ಸ್ಟೈಲಿಷ್ ಬೆಡಗಿಯರ ಮೈಮೇಲೆ ಕಂಗೊಳಿಸುತ್ತಿದೆ.

## ರೋಚಕ ಇತಿಹಾಸ

ಹಾಗಾದರೆ ಈ ಆನಿಮಲ್ ಪ್ರಿಂಟೆಡ್ ಡ್ರೆಸ್‌ಗಳು ಫ್ಯಾಷನ್ ದುನಿಯಾಕ್ಕೆ ಕಾಲಿಟ್ಟಿದ್ದಾದರೂ ಹೇಗೆ? ಇದಕ್ಕೂ ಒಂದು ರೋಚಕ ಇತಿಹಾಸ ಇದೆ. ರಾಜ ಮಹಾರಾಜರು, ಋಷಿಮುನಿಗಳು ಸಿಂಹದ ಚರ್ಮದ ಮೇಲೆ ಕುಳಿತು ಜಪತಪ ಮಾಡುತ್ತಿದ್ದರು. ಶಿವ ದೇವರು ಹುಲಿಯ ಚರ್ಮವನ್ನು ತನ್ನ ಬಟ್ಟೆಯನ್ನಾಗಿ ಧರಿಸಿರುವ ಕಥೆ ನಮಗೆಲ್ಲರಿಗೆ ಗೊತ್ತೇ ಇದೆ. ಇತಿಹಾಸ ಕಾಲದಲ್ಲೇ ಇದ್ದ ಈ ಮೂಲ ಸ್ವರೂಪದ ಚರ್ಮದ ಬಳಕೆ ಕಾಲ ಕಾಲಕ್ಕೆ ಬದಲಾಗಿದೆ. ಪ್ರಾಣಿಗಳ ತೊಗಲಿನಿಂದ ಮಾಡಿದ ಕೃಷ್ಣಾಜಿನವನ್ನು ದೇವರ ಪೂಜೆಗೆ ಬಳಸುವುದೂ ಪದ್ಧತಿ. ಚರ್ಮದ ಚಪ್ಪಲಿ ಧರಿಸಿ ಓಡಾಡುತ್ತಿದ್ದುದೂ ಇದೆ.

ಈ ಅನಿಮಲ್ ಪ್ರಿಂಟೆಡ್ ಡ್ರೆಸ್‌ನಲ್ಲಿ ಎಲ್ಲಾ ಬಗೆಯ ವೈವಿಧ್ಯಗಳೂ ಈಗ ಲಭ್ಯ. ಈಗಿನ ಹುಡುಗಿಯರು ಧರಿಸುವ ಎಲ್ಲಾ ರೀತಿಯ ಡ್ರೆಸ್‌ಗಳಲ್ಲಿ ಪ್ರಾಣಿಗಳ ಪ್ರತಿಕೃತಿಯಂತಿರುವ ಪ್ರಿಂಟ್ ಅನ್ನು ಕಾಣಬಹುದು. ನಿಮಗೆ ಆಯ್ಕೆ ಮಾಡಲು ಗೊಂದಲ ಆಗುವಷ್ಟು ವೆರೈಟಿ ಡ್ರೆಸ್‌ಗಳು ಮಾರುಕಟ್ಟೆಯಲ್ಲಿ ಪೈಪೋಟಿ ನಡೆಸುತ್ತಿವೆ. ಲೆಗಿಂಗ್ಸ್, ಜೀನ್ಸ್, ದುಪ್ಪಟಾಗಳು, ಫ್ರಾಕ್ಸ್, ಮಿನಿ ಉಡುಪು, ಕುರ್ತಾ, ಕೋಟ್... ಹೀಗೆ ಎಲ್ಲಾ ರೀತಿಯ ವೈವಿಧ್ಯಗಳೂ ದೊರಕುತ್ತದೆ.

ಈ ಡ್ರೆಸ್‌ಗಳು ಎಂತಹವರಿಗೂ ಸೂಟ್ ಆಗುತ್ತದೆ. ಹೀಗಾಗಿ ದಪ್ಪ ಇರುವವರಿಂದ ಹಿಡಿದು ತೆಳ್ಳಗಿರುವವರೆಗೆ, ಮಕ್ಕಳಿಂದ ಹಿಡಿದು ಹಿರಿಯವರವರೆಗೆ ಎಲ್ಲರೂ ಇಷ್ಟ ಪಡುತ್ತಿದ್ದಾರೆ. ಕಾಲಕ್ಕೆ ತಕ್ಕಂತೆ ಫ್ಯಾಬ್ರಿಕ್‌ನಲ್ಲಿ ಬದಲಾದರೂ ಅವುಗಳಲ್ಲಿ ದಿನೇ ದಿನೇ ಹೊಸ ಹೊಸ ವಿನ್ಯಾಸಗಳು ಬರುತ್ತಾ ಇದೆ. ಕಾಟನ್, ಸಿಲ್ಕ್, ಸಿಂಥೆಟಿಕ್, ಡೆನಿಮ್.. ಹೀಗೆ ಎಲ್ಲ ರೀತಿಯ ಬಟ್ಟೆ ವೈವಿಧ್ಯಗಳಲ್ಲೂ ಪ್ರಾಣಿಗಳ ಪ್ರಿಂಟ್ಸ್ ಉಡುಪುಗಳು ಲಭ್ಯ. ಅನಿಮಲ್ ಪ್ರಿಂಟ್ ಬಾಟಮ್ ಧರಿಸಿದರೆ ಅದಕ್ಕೆ ಮ್ಯಾಚ್ ಆಗುವ ಪ್ಲೈನ್ ಟಾಪ್ ಧರಿಸಬೇಕು.ಅದೇ ರೀತಿ ಆನಿಮಲ್ ಪ್ರಿಂಟೆಡ್ ಟಾಪ್ ಧರಿಸಿದರೆ ಸಿಂಪಲ್ ಆಗಿರೋ ಪ್ಲೈನ್ ಬಾಟಮ್ ಧರಿಸಿ. ಬಾಟಮ್ ಮತ್ತು ಟಾಪ್ ಎರಡೂ ಪ್ರಿಂಟೆಡ್ ಧರಿಸಿದರೆ ಅದು ಫ್ಯಾಷನ್ ಎನಿಸಿಕೊಳ್ಳುದಿಲ್ಲ. ಮ್ಯಾಚಿಂಗ್, ಕಾಂಟ್ರಾಸ್ಟ್, ಮಿಕ್ಸ್ ಅಂಡ್ ಮ್ಯಾಚ್... ಹೀಗೆ ಏನು ಬೇಕಾದರೂ ಮಾಡಿಕೊಳ್ಳಬಹುದು.



### ಆ್ಯಕ್ಸೆಸರೀಸ್‌ಗಳಲ್ಲೂ ಪ್ರಾಣಿಗಳು!

ಆನಿಮಲ್ ಪ್ರಿಂಟ್ ಕೇವಲ ಉಡುಪುಗಳಲ್ಲಿ ಮಾತ್ರ ಅಲ್ಲ. ಐ ಶ್ಯಾಡೋದಿಂದ ಹಿಡಿದು ಚಪ್ಪಲಿಗಳ ವರೆಗೆ ಎಲ್ಲದರಲ್ಲೂ ಇದು ಲಭ್ಯ. ಕಣ್ಣಿನ ಅಂದಕ್ಕೆ ಐ ಶ್ಯಾಡೊ, ಕಾಲಿನ ಸೌಂದರ್ಯಕ್ಕೆ ಸ್ಯಾಂಡಲ್.. ಇವುಗಳು ಕೂಡ ಆನಿಮಲ್ ಪ್ರಿಂಟೆಡ್ ಆಗಿರುತ್ತದೆ. ಕೇವಲ ಡ್ರೆಸ್ ಮಾತ್ರ ಅಲ್ಲ ಅದಕ್ಕೆ ತಕ್ಕಂತೆ ಆನಿಮಲ್ ಪ್ರಿಂಟೆಡ್ ಬ್ಯಾಗ್ ಕೂಡ ಇರಬೇಕು. ಅದರಲ್ಲೂ ಲಯನ್, ಜೇಬ್ರ ಬ್ಯಾಗ್‌ಗಳು ಹಾಟ್ ಫೇವರೆಟ್ ಎನಿಸಿಕೊಂಡಿದೆ. ಇದಕ್ಕೆ ಮ್ಯಾಚಿಂಗ್ ಆಗಿ ಆನಿಮಲ್ ಪ್ರಿಂಟೆಡ್ ಹೈ ಹೀಲ್ಡ್ ಚಪ್ಪಲಿಗಳು ಟ್ರೆಂಡಿ ಮಾರುಕಟ್ಟೆಯಲ್ಲಿ ಲಭ್ಯ.

## ಮೇಕಪ್‌ನಲ್ಲೂ...

ಬಟ್ಟೆ, ಆ್ಯಕ್ಸೆಸರೀಸ್ ಆದ ಮೇಲೆ ಇನ್ನು ಬಟ್ಟೆಗೆ ತಕ್ಕಂತೆ ಮೇಕಪ್ ಇಲ್ಲದಿದ್ದರೆ ಹೇಗೇ? ಚಿರತೆ ತೊಗಲಿನ ಉಡುಪು ತೊಟ್ಟ ಅದೇ ರೀತಿಯ ಐ ಶ್ಯಾಡೊ, ರೆಪ್ಪೆ ಕಲರ್ ಮಾಡಿಕೊಂಡರೆ ಸಖತ್ ಲುಕ್ ಕೊಡುತ್ತದೆ. ಅದೇ ರೀತಿ ಚೀಕ್‌ರೋಸ್, ಕೆನ್ನೆಯ ಮೇಲೆ ಗುಲಾಬಿ ರಂಗು ಬಳಿದುಕೊಳ್ಳುವ ಬದಲು ಕೊಂಚ ಪ್ರಾಣಿ ಚರ್ಮದ ವಿನ್ಯಾಸವನ್ನು ಪೇಂಟಿಂಗ್‌ನಲ್ಲಿ ಬಳಿದುಕೊಂಡರೆ ಅದು ಫ್ಯಾಷನ್‌ಗೆ ಮತ್ತೊಂದು ಪ್ಲಸ್ ಪಾಯಿಂಟ್. ಇದು ಬ್ಯುಟೀಷಿಯನ್ ಮಾಡುವ ಚಮತ್ಕಾರವೂ ಹೌದು.

ಇಂಥ ಫ್ಯಾಷನೆಬಲ್ ಉಡುಗೆಗಳನ್ನು ಎಲ್ಲಿ ಯಾವಾಗ ಹೇಗೆ ಬಳಸಬೇಕು ಎಂಬುದು ಗಮನದಲ್ಲಿ ಇಟ್ಟುಕೊಳ್ಳಬೇಕು. ಮದುವೆ, ಮುಂಜಿಗಳಂಥ ಶುಭ ಸಮಾರಂಭಗಳಿಗೆ ಇವುಗಳು ಖಂಡಿತಾ ಸೂಕ್ತವಲ್ಲ. ಸಂಜೆಯ ಪಾರ್ಟಿ, ಶಾಪಿಂಗ್, ಗೆಟ್‌ಟುಗೆದರ್ ಮುಂತಾದ ಸಂದರ್ಭಗಳಲ್ಲಿ ಧರಿಸಬಹುದು. ■